೨) ಐದು ಪ್ರಕರಣಗಳು ವಿಲೇವಾರಿ ಆಗಿದೆ. ಅವುಗಳ ವಿವರ ಈ ಕೆಳಗಿನಂತಿದೆ:

೧) ಎಂಇಜಿ ೬೫೦೧	೨೫-೩-೧೯೮೬
೨) ಸಿಟಿಎಕ್ಸ್ ೯೧೨೯	೨೬-೬-೧೯೮೬
೩) ಸಿಎನ್ಎಸ್ ೬೫೮೯	೧೫-೩-೧೯೮೮
೪) ಸಿಎನ್ಎಕ್ಸ್ ೭೮೮೯	೪-೯-೧೯೮೮
೫) ಎಂಇಜಿ ೭೯೬೬	೭-೧೦-೧೯೮೮

ಕುಂದಾಪುರ ತಾಲ್ಲೂಕಿನಲ್ಲಿ ಸಿ ಮತ್ತು ಡಿ ಕ್ಲಾಸಿಗಳ ಭೂಮಿಯಲ್ಲಿ ಆಕ್ರಮಣದ ಕುರಿತು

೧೨೭೨(೨೫೫೨) ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕುಂದಾಪುರ ತಾಲ್ಲೂಕಿನಲ್ಲಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಿದ 'ಸಿ' ಮತ್ತು 'ಡಿ' ಕ್ಲಾಸ್ ಭೂಮಿಗಳ ವಿಸ್ತೀರ್ಣವೆಷ್ಟು? (ವರ್ಗಾವಣೆ ಮಾಡಿದ ತಾರೀಖು ಮತ್ತು ವರ್ಷ ವಿವರ ನೀಡುವುದು)

ಆ) 'ಸಿ' ಮತ್ತು 'ಡಿ' ಕ್ಲಾಸ್ ಭೂಮಿಗಳನ್ನು ಸದರಿ ವರ್ಗಾವಣೆ ಸಮಯದಲ್ಲಿದ್ದ ರೈತ ಕುಟುಂಬಗಳ ಸಂಖ್ಯೆ ಎಷ್ಟು? ಮತ್ತು ಆಕ್ರಮಣ ಮಾಡಿಕೊಂಡಿರುವ ಭೂಮಿಗಳ ವಿಸ್ತೀರ್ಣವೆಷ್ಟು?

ಶ್ರೀ ಜಿ. ಜಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಕುಂದಾಪುರ ತಾಲ್ಲೂಕಿನಲ್ಲಿ ಏಪ್ರಿಲ್ ೧೯೮೪ರಲ್ಲಿ ಒಟ್ಟು ೩೧೭.೬೧ ಹೆಕ್ಟೇರ್ 'ಸಿ' ಮತ್ತು 'ಡಿ' ವರ್ಗದ ಜಮೀನನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾಯಿಸಿರುತ್ತಾರೆ.

(ಸಿ) ವರ್ಗ—೩೧೬.೪೦ ಹೆಕ್ಟೇರು,

(ಡಿ) ವರ್ಗ—೦.೨೧ ಹೆಕ್ಟೇರು.

ಆ) ಈ ಸ್ಥಳದಲ್ಲಿ ಯಾರೂ ಇಲ್ಲ. ಪ್ರಶ್ನೆ ಉದ್ಭವಿಸುವುದಿಲ್ಲ.

ಕೆಂಪು ಕಲ್ಲು ಉತ್ಪಾದನೆ

೧೨೭೩(೨೫೫೫) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬಿಜಾಪುರ ಜಿಲ್ಲೆಯ ಬಾಲಕುಂದ್ರಿಯಲ್ಲಿ ಹೊರದೇಶಕ್ಕೆ ಕಳುಹಿಸುವುದಕ್ಕಾಗಿ ದಿನ ಒಂದಕ್ಕೆ ತಯಾರಾಗುತ್ತಿರುವ ಕೆಂಪು ಕಲ್ಲಿನ ಪ್ರಮಾಣವೆಷ್ಟು?

ಆ) ತಯಾರಾಗುತ್ತಿರುವ ಕಲ್ಲುಗಳನ್ನು ಎಲ್ಲೆಲ್ಲಿಗೆ ಕಳುಹಿಸಲಾಗುವುದು?

ಇ) ಈ ಕಲ್ಲಿನ ಪ್ರದೇಶವನ್ನು ಖಾಸಗೀ ಗುತ್ತಿಗೆದಾರರಿಗೆ ಕೊಟ್ಟಿದ್ದು ಅವರಿಂದ ರಾಜ್ಯ ಬೊಕ್ಕಸಕ್ಕೆ ಸಂದಾಯವಾಗುವ ಹಣವೆಷ್ಟು? ಹಾಗಿದ್ದಲ್ಲಿ ಅದು ಲಾಭದಾಯಕವೆ?

ಈ) ಇಂತಹ ಬೆಲೆಬಾಳುವ ಕಲ್ಲುಗಳನ್ನು ಹೊರದೇಶಕ್ಕೆ (ಜಪಾನಿಗೆ) ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕೆ, ಗಣಿ ಮತ್ತು ಭೂ ವಿಜ್ಞಾನ ಸಚಿವರು).—

ಅ) ಈ ಪ್ರದೇಶದಲ್ಲಿ ದಿನ ಒಂದಕ್ಕೆ ಸರಾಸರಿ ೩.೫ ಘನ ಮೀಟರುಗಳಷ್ಟು ಕೆಂಪು ಕಲ್ಲು ಉತ್ಪಾದನೆಯಾಗುತ್ತದೆ.